# ಮೊಗೆದಷ್ಟೂ ಮಧುರ ನೆನಪುಗಳು!

**ಹಳೆಯ ನೆನಪುಗಳನ್ನು ಮೆಲುಕು ಹಾಕುವುದರಲ್ಲಿ ಏನೋ ಒಂದು ರೀತಿಯ ಖುಷಿ. ಮಧುರ ಭಾವನೆಗಳನ್ನು ಮೂಡಿಸುವ ನೆನಪುಗಳು ಜೀವನದುದ್ದಕ್ಕೂ ಮನಸ್ಸಿಗೆ ಆಹ್ಲಾದದ ಸಿಂಚನ ಮೂಡಿಸುತ್ತವೆ. ಸುಮಾರು 35 ವರ್ಷಗಳಷ್ಟು ಹಿಂದಿನ ನೆನಪುಗಳು ಇಂದಿಗೂ ಪುಳಕ ಉಂಟು ಮಾಡುತ್ತಿವೆ.**

**■ ಭ್ರಮರ, ಮೈಸೂರು**



ಹಳೆಯ ಭಾವಚಿತ್ರಗಳನ್ನು ನೋಡಿದಾಗ ಸಿಗುವ ಖುಷಿ, ಎಂದೋ ಗೆಳತಿಯರೊಟ್ಟಿಗೆ ಪ್ರವಾಸ ಹೋದದ್ದನ್ನು ನೆನಪಿಸಿಕೊಳ್ಳುವುದು, ಆಟೋಟ ಅಡುಗೆ ತಿಂಡಿ ಸ್ಪರ್ಧೆಗಳಲ್ಲಿ ಒಟ್ಟಿಗೇ ಭಾಗವಹಿಸಿದ್ದು... ಇವೆಲ್ಲದರಿಂದಲೂ ಸಿಗುವ ತೃಪ್ತಿ ಎಂದೂ ಮರೆಯಲಾರದಂತಹವು.

ನಾನು ಮೈಸೂರಿನ ಜಯಲಕ್ಷ್ಮೀಪುರಂ ಬಡಾವಣೆಗೆ ಹೊಸದಾಗಿ ಬಂದಿದ್ದೆ. ಬಡಾವಣೆಯ ವಾತಾವರಣ ಬಹಳ ಚೆನ್ನಾಗಿತ್ತು. ಆದರೂ ಸಂಗಾತಿಗಳಿಲ್ಲವೆಂಬ ಕೊರತೆ ಕಾಡುತ್ತಿತ್ತು. ವಾಯುವಿಹಾರಕ್ಕೆ ಹೋದಾಗ, ತರಕಾರಿ ಅಂಗಡಿಗೆ ಹೋದಾಗ, ಮನೆಯ ಹತ್ತಿರದಲ್ಲೇ ಇದ್ದ ರಾಯರ ಮಠಕ್ಕೆ ಹೋದಾಗ ನಾಲ್ಕಾರು ಸಮವಯಸ್ಕರು ಸಿಗುತ್ತಿದ್ದರು. ಅವರ ಪರಿಚಯ ಮಾಡಿಕೊಂಡೆ. ಪರಿಚಯ ಸ್ನೇಹವಾಗಿ, ಆತ್ಮೀಯರಾದೆವು. ಹೀಗೆ ಅಲ್ಲಿ ಇಲ್ಲಿ ಐದು ಹತ್ತು ನಿಮಿಷ ಭೇಟಿಯಾಗುವುದರ ಬದಲು ಎಲ್ಲರೂ ಒಟ್ಟಿಗೇ ಸೇರಿ ಸ್ವಲ್ಪ ಸಮಯ ಕಳೆಯಲು ಯೋಚಿಸಿದೆವು. ಈ ಯೋಚನೆಯೇ 'ಜಯಲಕ್ಷ್ಮೀಪುರಂ ಮಹಿಳಾ ಸಮಾಜ' ಅಸ್ತಿತ್ವಕ್ಕೆ ಬರಲು ಕಾರಣವಾಯಿತು.

ನಾವು ಗೆಳತಿಯರು ಕೂಡಲೇ ಕಾರ್ಯೋನ್ಮುಖರಾಗಿ 1984ನೇ ಇಸವಿ ದೀಪಾವಳಿಯಂದು 'ಜಯಲಕ್ಷ್ಮೀಪುರಂ ಮಹಿಳಾ ಸಮಾಜ'ವನ್ನು ಸ್ಥಾಪಿಸಿದೆವು. ಅಂದು ಡಾ. ದೇ.ಜ.ಗೌ. ಅವರು ಸಮಾಜವನ್ನು ಉದ್ಘಾಟಿಸಿ ನಮಗೆ ಆಶೀರ್ವದಿಸಿದರು. ಮೇಲಾಗಿ ತಮ್ಮದೇ ಆದ ಕುವೆಂಪು ಟ್ರಸ್ಟಿನಲ್ಲಿ, ನಾವು ಸಮಾಜ ನಡೆಸಲು ಒಂದು ಕೊಠಡಿಯನ್ನು ಉಚಿತವಾಗಿ ನಮಗೆ ಬಿಟ್ಟುಕೊಟ್ಟರು.

ಇದ್ದ 9 ಜನರಲ್ಲಿ, ಒಬ್ಬರು ಅಧ್ಯಕ್ಷೆ, ಒಬ್ಬರು ಕಾರ್ಯದರ್ಶಿ, ಖಜಾಂಚಿ ಒಬ್ಬರು ಉಳಿದ 6 ಜನ ಸದಸ್ಯೆಯರಾಗಿ ಮಹಿಳಾ ಸಮಾಜವನ್ನು ಪ್ರಾರಂಭಿಸಿದೆವು. ಒಂದು ತಿಂಗಳ ಕಳೆದಾಗಲೂ ನಾವು ಒಂಭತ್ತೇ ಜನ! ಇದೇನು ನಮ್ಮ ಸಮಾಜ ನಗೆಪಾಟಲಾಗುವುದೇನೋ ಎಂದು ಅಂಜಿಕೆ ನಮ್ಮನ್ನು ಕಾಡುತ್ತಿತ್ತು. ಬರುಬರುತ್ತಾ ಎರಡೇ ತಿಂಗಳಲ್ಲಿ 64 ಜನ ಸದಸ್ಯೆಯರಾದರು. ನಮ್ಮ ಖುಷಿಗೆ ಪಾರವೇ ಇಲ್ಲದಂತಾಯಿತು.

ಮಹಿಳಾ ಸಮಾಜ ಬಹಳ ಚೆನ್ನಾಗಿ ನಡೆಯುತ್ತಿತ್ತು. ಗೆಳತಿಯರೆಲ್ಲರೂ ಸೇರಿ ಹಬ್ಬಹರಿದಿನ, ಪೂಜೆ–ಪುನಸ್ಕಾರ, ವಾರ್ಷಿಕ ಸ್ಪರ್ಧೆಗಳು ಎಲ್ಲವನ್ನೂ ನಡೆಸುತ್ತಿದ್ದೆವು. ವಾರ್ಷಿಕೋತ್ಸವವನ್ನು ಪ್ರತಿವರ್ಷವೂ ಆಚರಿಸುತ್ತಿದ್ದೆವು. ಪ್ರತಿ ವರ್ಷ ದಸರಾದಲ್ಲಿ ವಸ್ತುಪ್ರದರ್ಶನದಲ್ಲಿ ಒಂದು ದಿನ ಕಾರ್ಯಕ್ರಮ ನಡೆಸಿಕೊಡುತ್ತಿದ್ದೆವು. ಆಕಾಶವಾಣಿಯಲ್ಲಿ ಮಹಿಳಾ ಕಾರ್ಯಕ್ರಮದಲ್ಲಿ ನಾಟಕ, ಸಂಗೀತ, ನಡೆಸಿಕೊಡುತ್ತಿದ್ದೆವು. ಹತ್ತಿರದ ಊರುಗಳಿಗೆ ಪ್ರವಾಸ ಹೋಗಿ ಬರುತ್ತಿದ್ದೆವು.

ಹೀಗೆ ಗೆಳತಿಯರ ಒಡನಾಟದಲ್ಲಿ ವರ್ಷಗಳು ಉರುಳಿದುದೇ ತಿಳಿಯಲಿಲ್ಲ. ಈ 2019ರ ದೀಪಾವಳಿಗೆ ಜಯಲಕ್ಷ್ಮೀಪುರಂ ಮಹಿಳಾ ಸಮಾಜ ಪ್ರಾರಂಭವಾಗಿ 35 ವರ್ಷಗಳು ಸಂದಿವೆ ಎಂದು ಹೇಳಲು ನನಗೆ ಬಹಳ ಹೆಮ್ಮೆ ಎನ್ನಿಸುತ್ತದೆ! ಗೆಳತಿಯರ ಸಹನಾಶೀಲತೆ, ವಿಶಾಲ ಮನೋಭಾವ ಒಗ್ಗಟ್ಟು ಎಲ್ಲದರಿಂದ ಸಮಾಜ ಇಂದಿಗೂ ಮುಂದುವರೆಯುತ್ತಿದೆ. ಎಲ್ಲರ ಒಡನಾಟ ನೆನಪಿನಂಗಳದಲ್ಲಿ ಮರೆಯಲಾಗದ ಸವಿನೆನಪಾಗಿ ಶಾಶ್ವತವಾಗಿ ನೆಲೆಯೂರಿದೆ. ■